

ಬಟ್ಟೆಗಳನ್ನು ಹಾಕಿ ಶೋಕಿಯಿಂದ ಓಡಾಡುವುದೆಂದರೆ ಭಾರಿ ಇಷ್ಟ. ತನ್ನಂತ ಅಸಾಧಾರಣ ಬುದ್ಧಿವಂತ ಹಳ್ಳಿಯಲ್ಲಿದ್ದರೆ ಜೀವನ ಹಾಳು ಮಾಡಿಕೊಂಡಂತೆ ಎಂದು ನಂಬಿಕೊಂಡು ಅಂಕೆ ಇಲ್ಲದೇ ಇಷ್ಟಬಂದ ಊರು ತಿರುಗುತ್ತಾ, ಹೊಸ ಹೊಸ ವರಸೆಗಳನ್ನು ತೋರಿಸುತ್ತಾ ಇರುವುದೇ ಅವನ ಚಾಳಿ.

ಇಂದಿರಾ ಗಾಂಧಿ, ದೇವರಾಜ ಅರಸು, ದೇವೇಗೌಡ, ಜೆ.ಎಚ್. ಪಟೇಲ್, ರಾಮಕೃಷ್ಣ ಹೆಗಡೆ ಹೀಗೆ ಹಲವಾರು ರಾಜಕಾರಣಿಗಳು, ಕಲ್ಯಾಣ್ ಕುಮಾರ್, ರಾಜ್ ಕುಮಾರ್, ರಾಜೇಶ್ ಮುಂತಾದ ನಟರೊಂದಿಗೆ ತಾನು ಇರುವ ಫೋಟೊಗಳನ್ನು ತೋರಿಸಿ ಮರುಳು ಮಾಡುವ ಕಲೆಗಾರ. ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಮುಂಬೈ, ಮದ್ರಾಸು, ಮಂಗಳೂರು ಎಂದು ತಿರುಗಾಡಿಕೊಂಡು ಇರುವ ರಸಿಕ ಜೀವನ ಅವನದ್ದು. ಮನೆ ಮಕ್ಕಳು ಈ ಜವಾಬ್ದಾರಿಯೆಲ್ಲ ತಲೆನೋವು ಎಂದುಕೊಂಡವನು. ಅವನ ತಂದೆ ತಾಯಿ ತಡವಾಗಿ ಹುಟ್ಟಿದ ಒಬ್ಬನೇ ಮಗನಿಗೆ ಬಹು ಬೇಗನೆ ಮದುವೆ ಮಾಡಿ ಮೊಮ್ಮಕ್ಕಳನ್ನು ಕಂಡು ನೆಮ್ಮದಿಯಾಗಿ ಇಹಲೋಕ ವ್ಯಾಪಾರ ಮುಗಿಸಿದ್ದರು. ಸುನಂದಾ 14 ವರ್ಷಕ್ಕೆ ಮದುವೆಯಾಗಿ 28 ವರ್ಷಕ್ಕಾಗಲೇ 5 ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನ ತಾಯಿಯಾಗಿದ್ದಳು.

ಹಿರಿಯರಿಲ್ಲದ ಮನೆ ಮಲ್ಲಿಕಾರ್ಜುನನಿಗೆ ಲಂಗು ಲಗಾಮಿಲ್ಲದಂತಾಗಿತ್ತು, ಮನೆ ಬಿಟ್ಟವನು ವಾರಗಟ್ಟಲೆಯಾದರೂ ವಾಪಾಸು ಬರುತ್ತಿರಲಿಲ್ಲ, ಬಂದಾಗಲೂ ಸುನಂದಳ ಕಣ್ತಪ್ಪಿಸಿಯೋ, ಬಾಯಿ